# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಾರ್ಡ್ ನಂ.174 ಹೆಚ್.ಎಸ್.ಆರ್ ಬಡಾವಣೆ ವಾರ್ಡ್ ಸಮಿತಿ ಸಭೆಯ ನಡುವಳಿಗಳು

ಮಾನ್ಯ ನೋಡಲ್ ಅಧಿಕಾರಿ/ಜಂಟಿ ಆಯುಕ್ತರು (ಮಹದೇವಪುರ) ರವರು ದಿನಾಂಕ: 19.12.2020 ರಂದು ಬೆಳಿಗ್ಗೆ 11.00 ಘಂಟೆಗೆ ವಾರ್ಡ್ ಸಮಿತಿ ಸಭೆಯನ್ನು ವಾರ್ಡ್ ನಂ.174 ಹೆಚ್.ಎಸ್.ಆರ್ ಕಛೇರಿಯಲ್ಲಿ ನಡೆಸಿದ್ದು, ಸಭೆಯ ನಡವಳಿ ಈ ಕೆಳಕಂಡಂತಿರುತ್ತದೆ.

**ಉಪಸ್ಥಿತರು:**

| ಅಧಿಕಾರಿ ಮತ್ತು ಸಿಬ್ಬಂದಿ ವರ್ಗದವರು | |
|---|---|
| 1. | ಶ್ರೀ ಆರ್. ವೆಂಕಟಚಾಲಪತಿ ಕ.ಆ.ಸೇ, ನೋಡಲ್ ಅಧಿಕಾರಿ ವಾ.ನಂ.174 ಹಾಗೂ ಜಂಟಿ ಆಯುಕ್ತರು (ಮಹದೇವಪುರ) ವಲಯ |
| 2. | ಶ್ರೀ ರವಿ.ಡಿ ಕಾರ್ಯದರ್ಶಿ, ಸಹಾಯಕ ಅಭಿಯಂತರರು |
| 3. | ಶ್ರೀ ಹನುಮಂತರಾಯ ಸಹಾಯಕ ಕಾರ್ಯಪಾಲಕ ಅಭಿಯಂತರರು, ಹೆಚ್.ಎಸ್.ಆರ್ ಉಪವಿಭಾಗ/ಬೃಹತ್ ನೀರುಗಾಲುವೆ/ಯೋಜನಾ ವಿಭಾಗ, |
| 4. | ಶ್ರೀಮತಿ ಲಕ್ಷ್ಮಿ.ಬಿ, ಸಹಾಯಕ ಕಂದಾಯ ಅಧಿಕಾರಿ ಹೆಚ್.ಎಸ್.ಆರ್ ಬಡಾವಣೆ |
| 5. | ಶ್ರೀ ನಂಜೇಶ್, ಎಂ.ಆರ್ ಕಿರಿಯ ಅಭಿಯಂತರರು, ಬೆಸ್ಕಾಂ |
| 6. | ಶ್ರೀ ರಮೇಶ್ ಡಿ ವಿದ್ಯುತ್ ವಿಭಾಗ (ಬೀದಿದೀಪ) |
| 7. | ಶ್ರೀ ವಿನೋದ್, ಹಿರಿಯ ಆರೋಗ್ಯ ಪರಿವೀಕ್ಷಕರು |
| 8. | ಶ್ರೀಮತಿ ಸತ್ಯವಾಣಿ, ಕಿರಿಯ ಆರೋಗ್ಯ ಪರಿವೀಕ್ಷಕರು |
| 9. | ಶ್ರೀ ಪರಮೇಶ್, ದ್ವಿ.ದ.ಸ. ತೋಟಗಾರಿಕೆ ಇಲಾಖೆ |
| 10. | ಶ್ರೀ ಚಂದ್ರಶೇಖರ ಆರ್.ಡಬ್ಲ್ಯು.ಎ |
| 11. | ಶ್ರೀ ಬಿ.ಎಂ. ರಮೇಶ್ ಆರ್.ಡಬ್ಲ್ಯು.ಎ |
| 12. | ಶ್ರೀ ರಾಮಚಂದ್ರ ಆರ್.ಡಬ್ಲ್ಯು.ಎ |
| 13. | ಶ್ರೀಮತಿ ಡಾ|| ಶಾಂತಿ, ಆರ್.ಡಬ್ಲ್ಯು.ಎ |
| 14. | ಶ್ರೀಮತಿ ದೀಪ್ತಾ ಆರ್.ಡಬ್ಲ್ಯು.ಎ |

ಮಾನ್ಯ ನೋಡಲ್ ಅಧಿಕಾರಿ/ಜಂಟಿ ಆಯುಕ್ತರು (ಮಹದೇವಪುರ) ರವರ ಸಮ್ಮುಖದಲ್ಲಿ ಸಭೆಗೆ ಹಾಜರಾದ ಎಲ್ಲಾ ಇಲಾಖೆಯ ಅಧಿಕಾರಿ/ಸಿಬ್ಬಂದಿ ಹಾಗೂ ಸಂಘ ಸಂಸ್ಥೆಗಳ ಪದಾಧಿಕಾರಿಗಳಿಗೆ ಮತ್ತು ಸಾರ್ವಜನಿಕರಿಗೆ ಸ್ವಾಗತ ಕೋರುತ್ತಾ, ಸಭೆಯನ್ನು ಪ್ರಾರಂಭಿಸಲಾಯಿತು.

ಹಿಂದಿನ ಸಭಾ ನಡವಳಿಯ ಪ್ರತಿ ಅಂಶದ ಬಗ್ಗೆ ಚರ್ಚಿಸಿ ಇಂಜಿಯರಿಂಗ್, ಕೋವಿಡ್-19 ತಂಡಗಳು ಉತ್ತಮ ರೀತಿಯಲ್ಲಿ ಕಾರ್ಯನಿರ್ವಹಿಸಿ ಸುಧಾರಣೆ ತಂದಿರುವುದನ್ನು ಗಮನಿಸಿದ್ದು, ಇನ್ನು ಉತ್ತಮ ರೀತಿಯಲ್ಲಿ ಮುಂದುವರೆಸಲು ನೋಡಲ್ ಅಧಿಕಾರಿಯವರು ತಿಳಿಸಿದರು.

Scanned with Car

| ಕ್ರ.ಸಂ | ಇಲಾಖೆ | ವಿಷಯ |
|---|---|---|
| 1 | ಬೀದಿ ದೀಪಗಳು (ವಿದ್ಯುತ್) | ಹಿಂದಿನ ಸಭೆಯಲ್ಲಿ ಚರ್ಚಿಸಿರುವ ವಿಷಯಗಳ ಬಗ್ಗೆ ತೆಗೆದುಕೊಂಡ ಕ್ರಮಗಳನ್ನು ಪ್ರಸ್ತಾಪಿಸಲಾಗಿದ್ದು, 6ನೇ ಸೆಕ್ಟರ್ ಉದ್ಯಾನವನದಲ್ಲಿ ಬೀದಿ ದೀಪಗಳನ್ನು ಅಳವಡಿಸಿದ್ದು, ಕ್ರಮ ವಹಿಸಲಾಗಿದೆ ಎಂದು ಸಹಾಯಕ ಅಭಿಯಂತರರು, ವಿದ್ಯುತ್ ರವರು ತಿಳಿಸಿರುತ್ತಾರೆ.<br>• 27ನೇ ಮುಖ್ಯ ರಸ್ತೆಯಲ್ಲಿ, ಬೀದಿ ದೀಪಗಳ ನಿರ್ವಹಣೆ ಮಾಡಲು ಸದಸ್ಯರು ಕೋರಿದ್ದು, ಈ ಬಗ್ಗೆ ಕ್ರಮ ವಹಿಸಲು ಅಧ್ಯಕ್ಷರು ಸೂಚಿಸಿರುತ್ತಾರೆ.<br>**ಕ್ರಮ : ಸಹಾಯಕ ಅಭಿಯಂತರರು, (ವಿದ್ಯುತ್ ವಿಭಾಗ)** |
| 2 | ಟೆಸ್ಕಾಂ | ವಾರ್ಡ್ ವ್ಯಾಪ್ತಿಯಲ್ಲಿ ವಿದ್ಯುತ್ ತಂತಿಗಳಿಗೆ ಅಡ್ಡಲಾಗಿರುವ ಮರದ ರೆಂಬೆ ಕತ್ತರಿಸಿದ್ದು, ಆ ಸ್ಥಳದಲ್ಲಿಯೆ ಶೇಖರಿಸಿರುತ್ತಾರೆ. ಅದನ್ನು ತೆರವುಗೊಳಿಸುವಂತೆ ಸದಸ್ಯರು ಕೋರಿರುತ್ತಾರೆ ಹಾಗೂ ಈ ಬಗ್ಗೆ Heavy duty shredder machine ಬಿ.ಬಿ.ಎಂ.ಪಿ. ಸ್ಥಳದಲ್ಲಿ ಕಾಯ್ದಿರಿಸಿ ಟೆಸ್ಕಾಂ ಮಾರ್ಗ ಸೂಚಿಯನ್ನು ಪರಿಶೀಲಿಸಿ shredder machine ಅಳವಡಿಸಲು ಅಧ್ಯಕ್ಷರು ಸೂಚಿಸಿರುತ್ತಾರೆ.<br>• ವಾರ್ಡ್ ವ್ಯಾಪ್ತಿಯಲ್ಲಿ ಇರುವ ಹಳೆ ವಿದ್ಯುತ್ ಕಂಬಗಳನ್ನು ತೆರವುಗೊಳಿಸಲು ಸದಸ್ಯರು ಕೋರಿರುತ್ತಾರೆ, ಈ ಬಗ್ಗೆ ಕ್ರಿಯಾಯೋಜನೆ ತಯಾರಿಸಿ ಕ್ರಮ ವಹಿಸಲು ಅಧ್ಯಕ್ಷರು ಸೂಚಿಸಿರುತ್ತಾರೆ.<br>• ಬಿ.ಕೆ.ಎಲ್ ಕಾಲೋನಿಯ ಹಿಂಭಾಗ ವಿದ್ಯುತ್ ಟ್ರಾನ್ಸ್‌ಫಾರ್ಮರ್ ಇದ್ದು, ಅದನ್ನು ತೆರವುಗೊಳಿಸಲು ಸದಸ್ಯರು ಕೋರಿರುತ್ತಾರೆ. ಈ ಬಗ್ಗೆ ಕ್ರಮ ವಹಿಸುವಂತೆ ಸಂಬಂಧಪಟ್ಟ ಅಭಿಯಂತರರಿಗೆ ಅಧ್ಯಕ್ಷರು ಸೂಚಿಸಿರುತ್ತಾರೆ.<br>**ಕ್ರಮ : ಕಿರಿಯ ಅಭಿಯಂತರರು (ಟೆಸ್ಕಾಂ)** |
| 3 | ಘನತ್ಯಾಜ್ಯ ನಿರ್ವಹಣೆ | ವಾರ್ಡ್ ವ್ಯಾಪ್ತಿಯ 4ನೇ ಸೆಕ್ಟರ್, 13ನೇ ಅಡ್ಡ ರಸ್ತೆಯಲ್ಲಿರುವ ಕಲಿಕಾ ಕೇಂದ್ರ ಆವರಣದಲ್ಲಿ Heavy duty shredder machine ಅಳವಡಿಸಿದ್ದು, ರಾಜ್ಯಮಟ್ಟದಲ್ಲಿ ಪ್ರಶಂಸೆಗಳಿಸಿದ್ದು, ಇದೇ ರೀತಿ ಕಾರ್ಯವನ್ನು ಮುಂದುವರೆಸಲು ಅಧ್ಯಕ್ಷರು ತಿಳಿಸಿದ್ದು, ಈ ಬಗ್ಗೆ ಸಾರ್ವಜನಿಕರ ಗಮನಕ್ಕೆ ತರುವಂತೆ ಪ್ರಚ್ಯುರ ಪಡಿಸಿ ಅರಿವು ಮೂಡಿಸಲು ಅಧ್ಯಕ್ಷಕರು ಸೂಚಿಸಿರುತ್ತಾರೆ<br>• ವಾರ್ಡ್ ವ್ಯಾಪ್ತಿಯಲ್ಲಿ ಟೆಸ್ಕಾಂ ವಿಭಾಗದರವರು ವಿದ್ಯುತ್ ತಂತಿಗಳಿಗೆ ಅಡ್ಡಲಾಗಿರುವ ಮರದ ರೆಂಬೆಗಳನ್ನು ಕತ್ತರಿಸಿ, ಸ್ಥಳದಲ್ಲಿಯೆ ಶೇಖರಿಸಿರುತ್ತಾರೆ, ಇದನ್ನು ತೆರವುಗೊಳಿಸುವ ಸಂಬಂಧ Heavy duty shredder machine ಅಳವಡಿಸಲು ಅಧೀಕ್ಷಕ ಅಭಿಯಂತರರ ಗಮನಕ್ಕೆ ತಂದು ಅನುಮೋದನೆಗಾಗಿ ಕಡತವನ್ನು ತಯಾರಿಸಲು ಅಧ್ಯಕ್ಷರು ಸೂಚಿಸಿರುತ್ತಾರೆ.<br>**ಕ್ರಮ : ಕಿರಿಯ ಆರೋಗ್ಯ ಪರಿವೀಕ್ಷಕರು** |
| 4 | ಕಂದಾಯ ವಿಭಾಗ | ಮಾನ್ಯ ಆಯುಕ್ತರ ರವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ Begging and Hawking children identification ಸರ್ವೆ ನಡೆಸಲು ಸೂಚನೆ ನೀಡಿದ್ದು, ಭಿಕ್ಷೆ ಬೇಡುವ ಅಥವ ಟ್ರಾಫಿಕ್ ಸಿಗ್ನಲ್‌ಗಳ ಬಳಿ ಅಟಿಕ/ವಸ್ತುಗಳನ್ನು ಮಾರಾಟ ಮಾಡುವಂತಹ ಮಕ್ಕಳ ಹಾಗೂ ಸ್ಥಂಗಳಲ್ಲಿ ವಾಸಿಸುತ್ತಿರುವ ಮಕ್ಕಳ ನಿಖರ ಮಾಹಿತಿಯನ್ನು ತ್ವರಿತ ಗತಿಯಲ್ಲಿ ಸರ್ವೆ ಮಾಡಿ ಪಟ್ಟಿ ಸಿದ್ಧಪಡಿಸಬೇಕು ಹಾಗೂ ರಸ್ತೆ/ಪಾದಚಾರಿ ಮಾರ್ಗ ರೈಲ್ವೆ ನಿಲ್ದಾಣ, ಬಸ್ ನಿಲ್ದಾಣ/ ತಂಗುದಾಣ/ಮಾರುಕಟ್ಟೆ/ ದೇವಸ್ಥಾನಗಳ ಸೇರಿದಂತೆ ಇನ್ನಿತರ ಸ್ಥಳಗಳಲ್ಲಿ (ಸೂರು) ಮನೆ ಇಲ್ಲದೆ ಮಲಗಿರುವವರನ್ನು ಗುರುತಿಸಿ |

Scanned with Car

| | | |
|---|---|---|
| | | ಪಟ್ಟಿಯನ್ನು ಸಿದ್ಧಪಡಿಸುವಂತೆ ಸೂಚನೆ ನೀಡಿದ್ದು, ಈ ಬಗ್ಗೆ ಎಲ್ಲಾ ಅಧಿಕಾರಿಗಳು/ವಾರ್ಡ್ ಸದಸ್ಯರ ಸಹಕಾರದೊಂದಿಗೆ ಕಾರ್ಯಕ್ರಮವನ್ನು ಏರ್ಪಡಿಸಲು ಅಧ್ಯಕ್ಷರು ಸೂಚಿಸಿರುತ್ತಾರೆ.<br>• ವಾರ್ಡ್ ವ್ಯಾಪ್ತಿಯಲ್ಲಿ ಅನಧಿಕೃತವಾಗಿ ಮನೆ ನಿರ್ಮಿಸಿಕೊಂಡು ಹಾಗೂ ಬೈಲಾ ಉಲ್ಲಂಘನೆ ಮಾಡಿ ಹೆಚ್ಚುವರಿ ಮಹಡಿಗಳನ್ನು ನಿರ್ಮಿಸಿದ್ದು ಹಾಗೂ ಕಟ್ಟಡವಿದರು ಸಹ ಖಾಲಿ ನಿವೇಶನವೆಂದು ತಿಳಿಸಿ ಕಂದಾಯ ಪಾವತಿಸಿರುತ್ತಾರೆಂದು ಸದಸ್ಯರು ಕೋರಿರುತ್ತಾರೆ. ಈ ಬಗ್ಗೆ ಕ್ರಿಯಾಯೋಜನೆ ಸಿದ್ಧಪಡಿಸಿ ಖಾಲಿ ನಿವೇಶನ, ವಸತಿ ವಾಣಿಜ್ಯ ಕಟ್ಟಡಗಳ ಅಂಕಿ ಅಂಶಗಳ ಪಟ್ಟಿ ಮಾಡಿ ಕಂದಾಯ ಪಾವತಿಸಲು ಸಂಬಂಧಪಟ್ಟ ಅಧಿಕಾರಿಗಳಿಗೆ ಅಧ್ಯಕ್ಷರು ಸೂಚಿಸಿರುತ್ತಾರೆ.<br>**ಕ್ರಮ: ಸಹಾಯಕ ಕಂದಾಯ ಅಧಿಕಾರಿಗಳು ಹೆಚ್.ಎಸ್.ಆರ್ ಉಪವಿಭಾಗ** |
| 5 | ಕಾಮಗಾರಿ ಇಲಾಖೆ | ಹಿಂದಿನ ಸಭೆಯಲ್ಲಿ ಚರ್ಚಿಸಿರುವ ವಿಷಯಗಳ ಬಗ್ಗೆ ಪ್ರಸ್ತಾಪಿಸಲಾಗಿದ್ದು, ಕ್ರಮವಹಿಸಲಾಗಿದೆ ಎಂದು ಸಹಾಯಕ ಅಭಿಯಂತರರು ತಿಳಿಸಿರುತ್ತಾರೆ.<br>• 19ನೇ ಅಡ್ಡ ರಸ್ತೆ 2ನೇ ಸೆಕ್ಟರ್‌ರಲ್ಲಿ ಮಣ್ಣು ತುಂಬಿ ಸಾರ್ವಜನಿಕ ರಸ್ತೆಯನ್ನು ಮುಚ್ಚಿರುವ ಬಗ್ಗೆ ಸದಸ್ಯರ ಸಭೆಯ ಗಮನಕ್ಕೆ ತಂದಿರುತ್ತಾರೆ. ಸದರಿ ಸ್ಥಳದಲ್ಲಿನ ಮಣ್ಣನ್ನು ತೆರವುಗೊಳಿಸಿ ರಸ್ತೆ ನಿರ್ಮಾಣ ಮಾಡುವಂತೆ ಕೋರಿರುತ್ತಾರೆ. ಈ ಬಗ್ಗೆ ಸೂಕ್ತ ಕ್ರಮ ವಹಿಸುವಂತೆ ಅಧ್ಯಕ್ಷರು ಸಹಾಯಕ ಅಭಿಯಂತರರಿಗೆ ಸೂಚಿಸಿರುತ್ತಾರೆ.<br>• ವಾರ್ಡ್ ವ್ಯಾಪ್ತಿಯ 7ನೇ ಸೆಕ್ಟರ್‌ನಲ್ಲಿ ಕೆಲವು ರಸ್ತೆಗಳಲ್ಲಿರುವ ಚರಂಡಿಯ ಮೇಲ್ಭಾಗದಲ್ಲಿ ಕವರಿಂಗ್ ಸ್ಲ್ಯಾಬ್ಸ್ ಅಳವಡಿಸಲು ಸದಸ್ಯರು ಕೋರಿರುತ್ತಾರೆ. ಈ ಬಗ್ಗೆ ಕ್ರಮ ವಹಿಸುವಂತೆ ಅಧ್ಯಕ್ಷರು ಸೂಚಿಸಿರುತ್ತಾರೆ.<br>**ಕ್ರಮ : ಸಹಾಯಕ ಅಭಿಯಂತರರು,** |

ಅಂತಿಮವಾಗಿ ಮಾನ್ಯ ನೋಡಲ್ ಅಧಿಕಾರಿಗಳು, ವಾರ್ಡ್ ನಂ. 174 ಹಾಗೂ ಜಂಟಿ ಆಯುಕ್ತರು (ಮಹಾದೇವಪುರ) ವಲಯ ರವರು ಸಭೆಯಲ್ಲಿ ಚರ್ಚಿಸಲಾದ ಎಲ್ಲಾ ವಿಷಯಗಳ ಬಗ್ಗೆ ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳು ತುರ್ತು ಕ್ರಮವಹಿಸಲು ಸೂಚಿಸಿದರು ಹಾಗೂ ಸಾರ್ವಜನಿಕರು ನೀಡಿರುವ ದೂರಿನ ಬಗ್ಗೆ ಅಗತ್ಯ ಕ್ರಮವಹಿಸುವುದಾಗಿ ತಿಳಿಸುತ್ತಾ ಸಭೆಯಲ್ಲಿ ಹಾಜರಿದ್ದ ಎಲ್ಲಾರಿಗೂ ವಂದನೆಗಳನ್ನು ಸಲ್ಲಿಸುವುದರ ಮೂಲಕ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಕಾರ್ಯದರ್ಶಿ
ಸಹಾಯಕ ಅಭಿಯಂತರು
ಹೆಚ್.ಎಸ್.ಆರ್.ಬಡಾವಣೆ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ನೋಡಲ್ ಅಧಿಕಾರಿ ವಾರ್ಡ್ ನಂ.174
ಹೆಚ್.ಎಸ್.ಆರ್.ಬಡಾವಣೆ ಹಾಗೂ
ಜಂಟಿ ಆಯುಕ್ತರು ಮಹದೇವಪುರ ವಲಯ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

Scanned with Car